

### ತಡೆಗಟ್ಟುವ ಬಗೆ

ಮಂಪ್ಸ್‌ನ ವಿರುದ್ಧ ರಕ್ಷಣೆ ನೀಡಬಲ್ಲ ಜೆರಿಲ್ ಲಿನ್ ಮತ್ತು ಲೆನಿನ್ ಗ್ರಾಡ್ ಝಾಗ್ರೆಬ್ ಎಂಬ ಎರಡು ಬಗೆಯ ಲಸಿಕೆಗಳು ಲಭ್ಯವಿದ್ದು, ಎರಡೂ ಪರಿಣಾಮಕಾರಿಯಾಗಿರುತ್ತವೆ. ಮಂಪ್ಸ್ ಲಸಿಕೆಯನ್ನು ಎಂಎಂಆರ್ ಎಂಬ ಸಂಯುಕ್ತ ಲಸಿಕೆಯ ರೂಪದಲ್ಲಿ ಒಂಬತ್ತು ತಿಂಗಳುಗಳ ನಂತರ, ಹದಿನೈದು ತಿಂಗಳುಗಳ ನಂತರ ಮತ್ತು ಐದನೇ ವರ್ಷದಲ್ಲಿ ಹೀಗೆ ಮೂರು ಬಾರಿ ನೀಡಲಾಗುತ್ತದೆ. ಒಂದು ಬಾರಿಯೂ ಲಸಿಕೆಯನ್ನು ಪಡೆಯದಿರುವ ಮತ್ತು ಅಪೂರ್ಣವಾಗಿ ಲಸಿಕೆ ಪಡೆದಿರುವ ಮಕ್ಕಳಲ್ಲಿ ಮಂಪ್ಸ್ ಕಾಣಿಸಿಕೊಳ್ಳುವ ಸಾಧ್ಯತೆಯಿರುತ್ತದೆ.

ಇದುವರೆಗೆ ಲಸಿಕೆ ಪಡೆಯದೇ ಇರುವ ಹಾಗೂ ನೈಸರ್ಗಿಕವಾಗಿ ಮಂಪ್ಸ್ ಸೋಂಕಿನಿಂದ ಬಳಲದೇ ಇರುವ ಹದಿಹರೆಯದವರಿಗೆ ಕಡ್ಡಾಯವಾಗಿ ಮಂಪ್ಸ್ ಲಸಿಕೆ ನೀಡುವುದೊಳಿತು.

ತುತ್ತಾದ ವ್ಯಕ್ತಿಗಳು ಜೀವನಪರ್ಯಂತ ಆ ಸೋಂಕಿನ ವಿರುದ್ಧದ ರೋಗನಿರೋಧಕ ಶಕ್ತಿಯನ್ನು ಪಡೆಯುತ್ತಾರೆ.

### ದುಷ್ಪರಿಣಾಮಗಳು

- ಸಾಮಾನ್ಯವಾಗಿ ಮಂಪ್ಸ್ ಸೌಮ್ಯ ಸ್ವರೂಪದ ಕಾಯಿಲೆಯಾಗಿದ್ದರೂ ಹದಿಹರೆಯದವರು ಮತ್ತು ವಯಸ್ಕರಲ್ಲಿ ಅದರ ದುಷ್ಪರಿಣಾಮಗಳ ಸಾಧ್ಯತೆ ಹೆಚ್ಚು.
- ಗಂಡು ಮಕ್ಕಳಲ್ಲಿ ವೃಷಣಗಳ ಉರಿಯೂತ ಉಂಟಾಗಿ ಬಹಳ ಅಪರೂಪಕ್ಕೆ ಪುರುಷರ ಬಂಜೆತನಕ್ಕೂ ಕಾರಣವಾಗಬಹುದು.
- ಹೆಣ್ಣು ಮಕ್ಕಳಲ್ಲಿ ಅಂಡಾಶಯಗಳ ಉರಿಯೂತ ಉಂಟಾಗಿ ಫಲವತ್ತತೆ ಕ್ಷೀಣಿಸಬಹುದು.
- ಮೇದೋಜೀರಕಾಂಗದ ಉರಿಯೂತದಿಂದ ಬೆನ್ನಿನವರೆಗೂ ವ್ಯಾಪಿಸುವ ತೀವ್ರತರದ ಹೊಟ್ಟೆನೋವು, ವಾಂತಿ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಇದು ಮುಂದಿನ ದಿನಗಳಲ್ಲಿ ಮಧುಮೇಹಕ್ಕೂ ಕಾರಣವಾಗಬಹುದು.
- ಹೃದಯದ ಸ್ನಾಯುವಿನ ಉರಿಯೂತದಿಂದ ಹೃದಯ ವೈಫಲ್ಯ ಉಂಟಾಗಬಹುದು.
- ಮೆದುಳು ಮತ್ತು ಮೆದುಳುಪೊರೆಯ ಉರಿಯೂತದಿಂದ ಮಗು ಮರಣವನ್ನಪ್ಪಬಹುದು ಇಲ್ಲವೇ ಶಾಶ್ವತ ಅಂಗವೈಕಲ್ಯಕ್ಕೆ ತುತ್ತಾಗಬಹುದು.
- ಕಿವುಡುತನ ಮತ್ತು ಅಂಧತ್ವ ಉಂಟಾಗಬಹುದು.
- ಗರ್ಭಿಣಿ ಮಂಪ್ಸ್‌ಗೆ ತುತ್ತಾದರೆ ಭ್ರೂಣದಲ್ಲಿ ನೀರ್ದಲೆ ಉಂಟಾಗಬಹುದು.
- ಮೂತ್ರಪಿಂಡಗಳ ಉರಿಯೂತ, ಥೈರಾಯಿಡ್ ಗ್ರಂಥಿಯ ಉರಿಯೂತ, ಕೀಲುಗಳ ಉರಿಯೂತ ಇತ್ಯಾದಿ.


### ಚಿಕಿತ್ಸಾ ವಿಧಾನ

ಮಂಪ್ಸ್ ಒಂದು ವೈರಾಣುವಿನ ಕಾಯಿಲೆಯಾಗಿರುವುದರಿಂದ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇರುವುದಿಲ್ಲ. ರೋಗಲಕ್ಷಣಗಳಿಗನುಗುಣವಾಗಿ ಚಿಕಿತ್ಸೆ ನೀಡಲಾಗುತ್ತದೆ. ಜ್ವರದ ಶಮನಕ್ಕೆ ಪ್ಯಾರಸಿಟಮಾಲ್‌ನಂತಹ ಜ್ವರ ನಿವಾರಕ ಮತ್ತು ಉರಿಯೂತದ ಶಮನಕ್ಕೆ ಉರಿಯೂತ ನಿವಾರಕ ಔಷಧಗಳನ್ನು ಬಳಸಬಹುದು. ಯಾವುದೇ ದುಷ್ಪರಿಣಾಮ ಕಾಣಿಸಿಕೊಂಡರೆ ಅದಕ್ಕೆ ಸಂಬಂಧಿಸಿದ ಸೂಕ್ತ ಚಿಕಿತ್ಸೆಯ ಅಗತ್ಯವಿರುತ್ತದೆ. ಲವಣ ಮಿಶ್ರಿತ ದ್ರಾವಣದಿಂದ ಪದೇ ಪದೇ ಬಾಯಿ ಮುಕ್ಕಳಿಸುತ್ತಿರಬೇಕು. ■

# ವೈರಾಣು ಕಾಯಿಲೆ ಮಂಕಿಪಾಕ್ಸ್

ವೈರಾಣುವಿನಿಂದ ಬರುವ ಮಂಕಿಪಾಕ್ಸ್ ಸಿಡುಬಿನಂತೆಯೇ ಕಾಣುವ ಮತ್ತೊಂದು ಕಾಯಿಲೆ. ಜ್ವರ, ತಲೆನೋವು, ಬೆನ್ನು ನೋವು, ಮೈಕೈ ನೋವು, ಸುಸ್ತು ಮುಂತಾದ ಲಕ್ಷಣಗಳನ್ನು ಹೊಂದಿರುವ ಮಂಕಿಪಾಕ್ಸ್ ಬಂದವರಿಗೆ ಗದ್ದದ ಬಳಿ, ಕಂಕುಳಿನಲ್ಲಿ ಸಣ್ಣ ದದ್ದುಗಳು ಕಾಣಿಸುತ್ತವೆ. ಕೆಲ ದಿನಗಳಲ್ಲಿ ಈ ದದ್ದುಗಳು ದೊಡ್ಡದಾಗಿ ನೀರು ಗುಳ್ಳೆಗಳ ರೀತಿ ಆಗುತ್ತದೆ. ಜ್ವರ ತೀವ್ರವಾಗುತ್ತಿದ್ದಂತೆ ಗುಳ್ಳೆಗಳು ಕೆಂಪಾಗಿ ಮತ್ತಷ್ಟು ದೊಡ್ಡದಾಗುತ್ತವೆ.

ಕಾಯಿಲೆ ಎರಡರಿಂದ ನಾಲ್ಕು ವಾರ ಕಾಲ ಇರುತ್ತದೆ. ಆದರೆ ಚಿಕಿತ್ಸೆಗೆ ಬಲುಬೇಗ ಸ್ಪಂದಿಸುವ ರೋಗ ಇದು. ಅನಿಯಂತ್ರಿತ ಮಧುಮೇಹ, ಸ್ಟೀರಾಯ್ಡ್ ತೆಗೆದುಕೊಂಡವರಲ್ಲಿ, ಕ್ಯಾನ್ಸರ್ ರೋಗಿಗಳಲ್ಲಿ, ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಈ ರೋಗ ಬಾಧಿಸುವುದು ಹೆಚ್ಚು. ನೀರು ಗುಳ್ಳೆ ಒಡೆದು ವ್ರಣವಾಗಬಹುದು. ಈ ವೈರಾಣು ಶ್ವಾಸಕೋಶ ಸೇರಿದರೆ ಜ್ವರ ತೀವ್ರ ಸ್ವರೂಪ ಪಡೆದು ನ್ಯುಮೋನಿಯಾ ಉಂಟಾಗುವ ಅಪಾಯವೂ ಇದೆ ಎಂಬುದು ವೈದ್ಯರ ಎಚ್ಚರಿಕೆ.



ಸಿಡುಬಿಗೆ ನೀಡುವ ವ್ಯಾಕ್ಸೀನ್ ಅನ್ನು ಮಂಕಿಪಾಕ್ಸ್‌ಗೂ ಬಳಸಬಹುದು. ಸಿಡುಬು ರೋಗ ಸಂಪೂರ್ಣವಾಗಿ ನಿರ್ನಾಮ ಆದ ಕಾರಣ 1980ರಿಂದ ಸಿಡುಬು ವ್ಯಾಕ್ಸೀನ್ ತಯಾರಿಕೆ ನಿಲ್ಲಿಸಲಾಗಿದೆ. ಆದರೆ ರಷ್ಯಾ, ಅಮೆರಿಕ ಎರಡು ದೇಶಗಳಲ್ಲಿ ಸಿಡುಬು ವ್ಯಾಕ್ಸೀನ್‌ನ ಔಷಧಿ ಮೂಲವನ್ನು ಸಂರಕ್ಷಿಸಿ ಇಟ್ಟಿರುವ ಕಾರಣ ಹೊಸದಾಗಿ ಮಂಕಿಪಾಕ್ಸ್‌ಗೆ ಲಸಿಕೆ ಕಂಡುಹಿಡಿಯುವ ಅಗತ್ಯವಿಲ್ಲ' ಎಂಬುದು ವೈರಾಣು ತಜ್ಞರ ಅಭಿಮತ.

### ಸೋಂಕು ಹರಡುವ ವಾಹಕ

ಮಂಕಿಪಾಕ್ಸ್ ವೈರಸ್ ಶರೀರದ ಪರಸ್ಪರ ಸಂಪರ್ಕದಿಂದ ಹರಡುತ್ತದೆ. ಮಂಗ, ಇಲಿ, ಹೆಗ್ಗಣ ಸೋಂಕನ್ನು ಹರಡುವ ವಾಹಕಗಳು. ಮಂಕಿಪಾಕ್ಸ್ ಇದ್ದ ಪ್ರಾಣಿಗಳು ಸತ್ತಿದ್ದರೆ ಇವುಗಳ ದೇಹದಿಂದಲೂ ಸೋಂಕು ಹರಡಬಹುದು. ಪ್ರಾಣಿಗಳ ಸಂಪರ್ಕದಲ್ಲಿರುವ ಮನುಷ್ಯರ ದೇಹಕ್ಕೆ ವೈರಸ್ ಅಂಟಿಕೊಂಡಿದ್ದರೆ ಇಂತಹ ವ್ಯಕ್ತಿಗಳ ಮೂಲಕವೂ ವೈರಸ್ ಹರಡುವ ಸಾಧ್ಯತೆ ಅಧಿಕ. ಗರ್ಭಿಣಿಯರಲ್ಲಿ ವೈರಸ್ ಇದ್ದರೆ ಹುಟ್ಟಲಿರುವ ಮಗುವಿಗೂ ಮಂಕಿಪಾಕ್ಸ್ ಬರುವ ಸಾಧ್ಯತೆ ಹೆಚ್ಚು.

ಸಾಬೂನು, ಸ್ಯಾನಿಟೈಸರ್ ಬಳಸಿ ಕೈತೊಳೆದುಕೊಳ್ಳಬೇಕು. ಮಾಸ್ಕ್ ಬಳಸಬೇಕು. ರೋಗಿ ಬಳಸಿದ ಬಟ್ಟೆ ಬಿಸಿ ನೀರಿನಲ್ಲಿ ಪ್ರತ್ಯೇಕ ಒಗೆಯಬೇಕು. ತಟ್ಟೆ, ಲೋಟ ಪ್ರತ್ಯೇಕವಾಗಿಡಬೇಕು. ಮಂಕಿಪಾಕ್ಸ್ ವೈರಸ್ ಕಾಂಗೊ, ನೈಜೀರಿಯಾ, ಐವರಿಕೋಸ್ಟ್ ಮುಂತಾದ ಪಶ್ಚಿಮ ಆಫ್ರಿಕಾ ದೇಶಗಳಲ್ಲಿ ಮೊದಲ ಬಾರಿಗೆ ಪತ್ತೆಯಾಯಿತು. ಮೊದಲು ಇಲಿಯಿಂದ ನಾಯಿ, ಮಂಗಗಳಿಗೆ ಹರಡಿ ಬಳಿಕ ಮಂಗಗಳಿಗೆ ಈ ವೈರಾಣು ಹರಡಿದೆ. ಆದರೆ ಮಂಗಗಳ ಗುಂಪಿನಲ್ಲಿ ವೈರಸ್ ಪತ್ತೆಯಾದ ಕಾರಣ 'ಮಂಕಿಪಾಕ್ಸ್' ಎಂಬ ಹೆಸರು ಬಂದಿದೆ.

■ ಯು.ಎ.